<u>ಸಾಕ್ಷಿಯನ್ನು ದಿನಾಂಕಃ-04.08.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ಶ್ರೀ ಹೆಚ್.ಎಸ್.ಸಿ ವಕೀಲರಿಂದ - ವಾದಿಯಪರ</u>

1. ವಾದಿ ಮತ್ತು ಪ್ರತಿವಾದಿಗಳ ಪರಿಚಯ ನನಗೆ ಇದೆ. ಯಾವ ವಿಚಾರಕೆ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿದೆ. ನನ್ನ ಮಾವ ಬಿ.ಎಂ.ಮನೋಹರ ರವರು 41 ಎಕರೆ ಜಮೀನನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ 4 ಜನರಿಗೆ ವಿಭಾಗ ಮಾಡಿರುತ್ತಾರೆ ಎಂದರೆ ಸರಿ. ವಿಭಾಗ ಆದ ನಂತರ ಅವರವರಿಗೆ ಬಂದ ಜಮೀನಿನಲ್ಲಿ ಸ್ವಾದೀನ ಇದ್ದಾರೆ ಎಂದರೆ ಸರಿ. ತೋಟ ಹೊರತು ಪಡಿಸಿ ಬೇರೆ ಸ್ವತ್ತನ್ನು ಪಾಲು ಮಾಡಿರುವುದಿಲ್ಲ. ದಾವಾ ಎ ಷೆಡ್ಯೂಲ್ ಆಸ್ತಿಗಳು ಬಿ.ಎಂ.ಮನೋಹರ ಮತ್ತು 1ನೇ ಪ್ರತಿವಾದಿ ಪಾಲಿಗೆ ಹೋಗಿರುತ್ತೆ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಯ ಸಂಬಂಧ ಏನೇ ವ್ಯವಹಾರ ಆದರೂ ನನ್ನ ಗಮನಕ್ಕೆ ಬರುತ್ತದೆ ಎಂದರೆ ಸರಿ. ದಿಃ23-12-2015 ರಲ್ಲಿ ಸರೋಜಮ್ಮ ವಿಲ್ ನಾಮೆ ಬರೆದಿರುವ ವಿಚಾರ ನನಗೆ ಗೊತ್ತಿದೆ. ಸರೋಜಮ್ಮ ರವರು ಅಕ್ಟೋಬರ್ ತಿಂಗಳಲ್ಲಿ 2021 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ವಿಲ್ ಪ್ರಕಾರ ಸರ್ವೆ ನಂ.161/2 ರಲ್ಲಿ 2.30 ಎಕರೆ ನನಗೆ 1ನೇ ಪ್ರತಿವಾದಿ ದಾನ ಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿ.

2. ನಂತರ 1ನೇ ಪ್ರತಿವಾದಿ ಮತ್ತು ಮನೋಹರ ರವರು ಅವರಿಗೆ ಬಂದಿರುವಂತಹ ವಿಭಾಗದಲ್ಲಿ ತಲಾ ಎರಡು ಎಕರೆಯಂತೆ ವಾದಿ ಮತ್ತು 2ನೇ ಪ್ರತಿವಾದಿ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ ಅವರೇ ಸ್ವಾದೀನದಲ್ಲಿ ಸಹ ಇರುತ್ತಾರೆ ಎಂದರೆ ಸರಿ. ದಾನ ಪತ್ರ ಬರೆದು ಕೊಡುವ ಸಮಯದಲ್ಲಿ ಸರೋಜಮ್ಮ ರವರು ಆರೋಗ್ಯವಾಗಿದ್ದರು ಎಂದರೆ ಸರಿ. ಸರೋಜಮ್ಮ ಮತ್ತು 1ನೇ ಪ್ರತಿವಾದಿ ಮರಣ ಹೊಂದಿದ್ದಾರೆ ಎಂದರೆ ಸರಿ. ನಮ್ಮ ಅತ್ತೆ ಮಾವನ ಆಸ್ತಿಯಲ್ಲಿ ನನ್ನ ಗಂಡನಿಗೂ ಸಹ ಸಮ ಪಾಲು ಇರುತ್ತದೆ ಎಂದರೆ ಸರಿ. ಮತ್ತು ನನಗೂ ಸಹ ಅದರಲ್ಲಿ ಭಾಗ ಬರುತ್ತದೆ ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. 2ನೇ ಪ್ರತಿವಾದಿ ಮರಣ ಪತ್ರದ ಆಧಾರದ ಮೇಲೆ ಪವತಿ ಖಾತೆಗೆ ತಾಲ್ಲುಕು ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಾವು ಸಹ ಅದಕ್ಕೆ ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ದಿಃ18-07-2024 ರಲ್ಲಿ ಮರಣ ಶಾಸನದ ಆಧಾರದ ಮೇಲೆ ಫವತಿ ಖಾತೆ ಮಾಡಲು ಆಗುವುದಿಲ್ಲ ಅತ್ತೆ ಮತ್ತು ಮಾವನ ಹೆಸರಿನಲ್ಲಿ ಖಾತೆ ಮುಂದುವರೆಸಲು ಎಸಿ ನ್ಯಾಯಾಲಯದಲ್ಲಿ ಆದೇಶ ಆಗಿರುತ್ತದೆ ಎಂದರೆ ಸರಿ.

3. ತೆರಿಗೆಯಲ್ಲಿ ವಿನಾಯಿತಿ ಪಡೆಯುವ ಸಲುವಾಗಿ 41 ಎಕರೆ ತೋಟ ಮಾತ್ರ ಈ ಮೊದಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ

ಮನೆಯಲ್ಲಿ ಹೇಳುತ್ತಿದ್ದರು ಎಂದು ನುಡಿದಿರುತ್ತಾರೆ. ನಮ್ಮ ಅತ್ತೆ ಮಾವನ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳು ದಾವಾ ಸ್ವತ್ತುಗಳಿಗೆ ಹಕ್ಕುದಾರರ ಎಂದರೆ ಸರಿ.

ಪಾಟಿ ಸವಾಲುಃ ಶ್ರೀ. ಬಿ.ಎಂ.ವೈ ವಕೀಲರಿಂದ – 1, 2 ನೇ ಪ್ರತಿವಾದಿ ಪರ ವಕೀಲರಿಂದ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

ಸಹಿ/-

ಪ್ರ. ಸಿ.ಜೆ ಮತ್ತು ಜೆಎಂ.ಎಫ್ ಸಿ

ಸೋಮವಾರಪೇಟೆ